



# ಎಷ್ಟೊಂದು ಬೆರಳುಗಳು!

ವೈದ್ಯಕೀಯ ಭಾಷೆಯಲ್ಲಿ 'ಪಾಲಿಡಾಕ್ಟಿಲಿಜಮ್'ಎಂದರೆ ಹುಟ್ಟುವಾಗಲೇ ಹೆಚ್ಚಿನ ಕಾಲ್ಬೆರಳು ಅಥವಾ ಕೈ ಬೆರಳುಗಳನ್ನು ಹೊಂದಿರುವುದು ಎಂಬರ್ಥ. ಈ ತರಹ ಮಕ್ಕಳು ಹುಟ್ಟುವುದು ಅಪರೂಪ. ಬರೀ ಕೈಬೆರಳುಗಳ ಸಂಖ್ಯೆ ಹೆಚ್ಚು ಇರುವವರು ಸಿಗುತ್ತಾರೆ. ಆದರೆ ಕೈ ಮತ್ತು ಕಾಲುಗಳ ಎಲ್ಲ ಬೆರಳುಗಳೂ ಹೆಚ್ಚುವರಿ ಇರುವವರು ಇನ್ನೂ ಅಪರೂಪವೇ ಸರಿ.

ಮ್ಯಾನ್ಮಾರ್‌ನ ಯಾಂಗನ್ ಎಂಬ ಪ್ರಾಂತ್ಯದ ಲೆ ಯಟಿ ಮಿನ್ ಎಂಬ ಈ ಮಗು ಜನಿಸಿದಾಗಲೇ 12 ಕೈ ಬೆರಳು ಹಾಗೂ 14 ಕಾಲ್ಬೆರಳುಗಳನ್ನು ಹೊಂದಿದೆ. ಇದು 'ಗಿನ್ನಿಸ್ ವರ್ಲ್ಡ್ ರೆಕಾರ್ಡ್'ನಲ್ಲಿಯೂ ಸೇರ್ಪಡೆಯಾಗಲಿದೆ. 16 ತಿಂಗಳ ತನ್ನ ಮಗಳು ಒಟ್ಟು 26 ಬೆರಳುಗಳನ್ನು ಹೊಂದಿರುವುದು ಆಕೆಯ ಅಮ್ಮ ಫೈಯೋ ಮಿನ್ ಮಿನ್‌ಗೆ ಅತ್ಯಂತ ಹೆಮ್ಮೆಯ ವಿಷಯ! ಹೆಚ್ಚಿನ ಸಂಖ್ಯೆಯಲ್ಲಿ ಬೆರಳುಗಳು ಇರುವುದರಿಂದಲೇ ಲೆ ಯಟಿ ಮಿನ್, ವಸ್ತುಗಳನ್ನು ಬೀಳಿಸದೇ ಗಟ್ಟಿಯಾಗಿ ಹಿಡಿದುಕೊಳ್ಳುತ್ತಾಳಂತೆ. ಮನೆಯ ತುಂಬಾ ಪುಟ ಪುಟನೆ ಸಂತಸದಿಂದ ಓಡಾಡುತ್ತಾಳಂತೆ.

ಅತ್ಯಂತ ಹೆಚ್ಚಿನ ಬೆರಳುಗಳನ್ನು ಹೊಂದಿರುವ ಜೀವಂತ ವ್ಯಕ್ತಿಯೆಂಬ 'ಗಿನ್ನಿಸ್ ವರ್ಲ್ಡ್ ರೆಕಾರ್ಡ್' ಇದುವರೆಗೂ ಭಾರತೀಯರಿಬ್ಬರ ಹೆಸರಿನಲ್ಲಿತ್ತು. ಇವರಿಬ್ಬರೂ ತಲಾ 12 ಕೈ ಬೆರಳುಗಳನ್ನು ಹಾಗೂ 13 ಕಾಲ್ಬೆರಳುಗಳನ್ನು ಹೊಂದಿದ್ದರು. ಆದರೆ ಲೆ ಯಟಿ ಮಿನ್ ಈ ದಾಖಲೆಯನ್ನು ಮುರಿದು ಹೊಸ ದಾಖಲೆ ನಿರ್ಮಿಸಿದ್ದಾಳೆ.

■ ವಿದ್ಯಾ ಹಾಲಭಾವಿ

